O.S. NO. 162/2021
DW -2 .
Dated 20-03-2025

ಸಾಕ್ಷಿಯನ್ನು ಈ ದಿನ ದಿನಾಂಕ 20-03-2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

ಪಾಟಿ ಸವಾಲುಃ ವಾದಿ ಪರ ವಕೀಲರಿಂದಃ

ನನ್ನ ಊರು ಚನ್ನಾಪೂರ. ನಾನು ಕೃಷಿ ಕೆಲಸ ಮಾಡುತ್ತೇನೆ. ನನ್ನ ವಿದ್ಯಾಭ್ಯಾಸ ಬಿ ಎ ವರೆಗೆ ಆಗಿರುತ್ತದೆ. ನನ್ನ ವಿದ್ಯಾಬ್ಯಾಸ ಕಿತ್ತೂರನಲ್ಲಿ ಆಗಿರುತ್ತದೆ. 1 ನೇ ಪ್ರತಿವಾದಿ ನನ್ನ ಸಹಪಾಟಿ ಅಲ್ಲ. ಆದರೆ ಅಬವರು ನನಗೆ ಪರಿಚಯ ಇರುತ್ತಾರೆ. ನಾುನು ಪ್ರತಿವಾದಿ ಕೂಡಿ ಬೆಳೆದವರು ಅಲ್ಲ ಅಂದರೆ ಸರಿ . ವಾದಿ ಗಂಡ ಮಬಳೇಶ್ಚರ ನನ್ನ ಸಹಪಾಠಿ ಅಗಲಿ ಅಥವಾ ನಾನು ಅವರು ಕೂಡಿ ಬೆಳೆದಿಲ್ಲ ಅಂದರೆ ಸರಿ . ವಾದಿಯ ಮಾವ ಮಲ್ಲೆಶಪ್ಪ ಕಿತ್ತೂರ ಊರಿನಲ್ಲಿ ಪ್ರತಿಷ್ಟತಿ ವ್ಯಕ್ತಿ ಇದ್ದರುಅಂದರೆ ಸರಿ . ಸದರಿ ಮಲ್ಲೇಶಪ್ಪ ತನ್ನ ಓಣಿಯ ಆಜುಬಾಜು ಮನೆತನದ ಹಿರಿತನ ಮಾಡುತ್ತಿದ್ದ ಅಂದರೆ ಸರಿಯಲ್ಲ . ಸದರಿ ಮಲ್ಲೇಶಪ್ಪ ಊರಿನಲ್ಲಿ ಪ್ರತಿಷ್ಟಿತ ಇದ್ದಿದ್ದರಿಂದ ಆತನ ಮನೆತನದ ಹಿರಿತನ ಬೇರೆಯವರು ಯಾರು ಮಾಡಿಲ್ಲ ಅಂದರೆ ಸರಿಯಲ್ಲ . 1 ನೇ ಪ್ರತಿವಾದಿ ಮತ್ತು ಮಲ್ಲೇಶಪ್ಪ ಅನ್ಯೋನ್ಯವಾಗಿದ್ದರು ಅಂದರೆ ಸರಿ . ದಾವಾ ಆಸ್ತಿಗಳು ಮಲ್ಲೇಶಪ್ಪನ ಪಿತ್ರಾರ್ಜಿತ ಆಸ್ತಿ ಅಂದರೆ ಸರಿ . ಹೀಗಾಗಿ ವಾದಿಯ ಗಂಡ ಮಬಳೇಶ್ವರ ಮತ್ತು 1 ನೇ ಪ್ರತಿವಾದಿ ಅಣ್ಣತಮ್ಮ ಇರುವದರಿಂದ ದಾವಾ ಆಸ್ತಿಗಳಲ್ಲಿ ಅವರಿಗೆ ಸಮಪಾಲು ಇದೆ ಅಂದರೆ ಸರಿ . ವಾದಿ ಮತ್ತು ಪ್ರತಿವಾದಿಗಳ ಕುಟುಂಬದ ಯಾವ ಸಂದರ್ಬದಲ್ಲಿ ಹಿರಿತನ ಮಾಡಿದೀರಿ ಅಂದರೆ ಸಾಕ್ಷಿ ವಾದಿಯ ಗಂಡ

ಮಬಳೇಶ್ವರನಿಗೆ ಅನಾರೋಗ್ಯ ಇತ್ತು ಹೀಗಾಗಿ ಅವರಿಗೆ ಆಸ್ಪತ್ರೆಗೆ ತೋರಿಸುವಾಗ ಹಿರಿತನ ಮಾಡಿರುತ್ತೆನೆ ಎಂದು ನುಡಿದಿರುತ್ತಾರೆ . ಹಿರಿತನ ಅಂದರೆ ಕುಟುಂಬದಲ್ಲಿ ಸಮಸ್ಯೆ ಇದ್ದಾಗ ಆ ಬಗ್ಗೆ ಸಲಹೆ ಕೊಡುವುದು ಇರುತ್ತದೆ . 1 ನೇ ಪ್ರತಿವಾದಿ ಮತ್ತು ಮಬಳೇಶ್ವರನ ಮದ್ಯೆ ಯಾವುದೇ ಸಮಸ್ಯೆಗಳು ಆಗಲಿ ಅಥವಾ ಬಿನ್ನಾಭಿಪ್ರಾಯ ಇರಲಿಲ್ಲ ಅಂದರೆ ಸರಿ . ಹೀಗಾಗಿ ನಾನು ಅವರ ಕುಟುಂಬದ ಹಿರಿತನ ಮಾಡುವ ಪ್ರಸಂಗ ನನಗೆ ಬಂದಿಲ್ಲ ಅಂದರೆ ಸಾಕ್ಷಿ ಅವರ ಮದ್ಯೆ ಯಾವುದೇ ಜಗಳ ಆಗಿಲ್ಲ ಎಂದು ನುಡಿಯುತ್ತಾರೆ . ಭೂ ಪರಿವರ್ತನೆಗಾಗಿ 1 ನೇ ಪ್ರತಿವಾದಿ ಹಣ ಖರ್ಚು ಮಾಡಿದ ಬಗ್ಗೆ ನನಗೆ ವಯಕ್ತಿಕ ವಾಗಿ ಮಾಹಿತಿ ಇರುತ್ತದೆ. ಎಷ್ಟನೇ ಇಸ್ವಿಯಲ್ಲಿ ಭೂ ಪರಿವರ್ತನೆ ಮಾಡಿದ್ದರೆ ಎಂದರೆ 2015 ರಲ್ಲಿ ಮಾಡಿಸಿರುತ್ತಾರೆ. 2015ರಲ್ಲಿ ಭೂ ಪರಿವರ್ತನೆ ಗೆ ಸರ್ಕಾರ ಎಷ್ಟು ಶುಲ್ಕ ನಿಗದಿ ಪಡಿಸಿದ್ದರು ಎಂದು ನನಗೆ ಗೊತ್ತಿಲ್ಲ. 2015ರಲ್ಲಿ ಅಂದಾಜು ರೂ. 8-10 ಸಾವಿರ ಭೂ ಪರಿವರ್ತನೆ ಶುಲ್ಕ ಇದ್ದಿರಬಹದು ಎಂದರೆ ಸಾಕ್ಷಿ ರೂ. 4-5 ಲಕ್ಷ ಇರಬಹುದು ಎಂದು ನುಡಿದಿರುತ್ತಾರೆ. ಈಗ ತೊರಿಸಿದ ದಾಖಲೆ ಜಿಲ್ಲಾಧಿಕಾರಿ ಕಾರ್ಯಾಲಯ ಬೆಳಗಾವಿ ರವರ ದಿನಾಂಕ 07-03-2015 ರ ಅಧೀಕೃತ ಜ್ಞಾಪನಾ ಪತ್ರ ಇದೆ ಎಂದರೆ ಸರಿ. ಸದರಿ ದಾಖಲೆ ಸಾಕ್ಷಿ ನೊಡಿ ಗುರುತಿಸಿರುವುದರಿಂದ ನಿಪಿ - 25 ಎಂದು ಗುರುತಿಸಲಾಯಿತು. ನಿಪಿ - 25 ರ ಪ್ರಕಾರ ಎಕರೆಗೆ ರೂ. 8,825/- ಭೂ ಪರಿವರ್ತನಾ ಶುಲ್ಕ ನಿಗದಿ ಆಗಿತ್ತು ಎಂದರೆ ಸರಿ. ನಿಪಿ - 25 ರ ಪ್ರಕಾರ ಭೂ ಪರಿವರ್ತನಾ ಶುಲ್ಕ ಒಟ್ಟು ರೂ. 32,884/- ಭರಣಾ ಮಾಡಿರುತ್ತಾರೆ ಎಂದರೆ ಸರಿ. ಸದರಿ ಈ ಮೇಲೆ ಹೇಳಿದ ರೂ . 32,884/- ಹೊರತು

O.S. NO. 162/2021

DW -2 .

Dated 20-03-2025

ಪಡಿಸಿ ಭೂ ಪರಿವರ್ತನೆ ಗೆ ಬೇರೆ ಯಾವುದೇ ಶುಲ್ಕ ಇರಲಿಲ್ಲ ಎಂದರೆ ಸರಿ. ನಿಪಿ - 25 ಪ್ರಕಾರ ಭೂ ಪರಿವರ್ತನೆಗೆ ಖರ್ಚು ರೂ. 35 ರಿಂದ 36 ಸಾವಿರ ರೂಪಾಯಿ ವಾದಿಯ ಗಂಡ ಮಹಾಬಳೇಶ್ವರ ಮತ್ತು 1 ನೇ ಪ್ರತಿವಾದಿ ಸೇರಿ ಭರಣಾ ಮಾಡಿದ್ದಾರೆ ಎಂದರೆ ಸಾಕ್ಷಿ ವಾದಿ ಗಂಡ ಯಾವುದೇ ಉದ್ಯೋಗ ಮಾಡುತ್ತಿರಲಿಲ್ಲ ಎಂದು ನುಡಿದಿರುತ್ತಾರೆ. ವಾದಿಯ ಗಂಡ ಭೂ ಪರಿವರ್ತನೆಗೆ ಯಾವುದೇ ಹಣ ಸಂದಾಯ ಮಾಡಿಲ್ಲ ಎನ್ನುವುದು ಮತ್ತು ಆತ ಯಾವುದೇ ಉದ್ಯೋಗ ಮಾಡುತ್ತಿರಲಿಲ್ಲ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ವಾದಿಯ ಗಂಡ ಮತ್ತು 1 ನೇ ಪ್ರತಿವಾದಿ ಇಬ್ಬರು ಸೇರಿ ಭೂ ಪರಿವರ್ತನೆಗೆ ಹಣ ಖರ್ಚು ಮಾಡಿದ ವಿಷಯ ನನಗೆ ಗೊತ್ತಿದ್ದರೂ ಸಹ 1 ನೇ ಪ್ರತಿವಾದಿಯ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ - ಇಲ್ಲ.

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕೀಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು

ಬೈಲಹೊಂಗಲ.